**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1060/2019**

**ಸಿ.ಡಬ್ಲ್ಯೂಃ 5, ಪಿ.ಡಬ್ಲ್ಯೂಃ 4**

| | | |
|---|---|---|
| ಸಾಕ್ಷಿದಾರರ ಹೆಸರು | : | ಮಸೀಹಾ ಮಿರಾನ ಪಿರಜಾದೆ |
| ತಂದೆಯ ಹೆಸರು | : | ಮೀರನ್ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಖಾಸಗಿ ಕೆಲಸ , ಮುಂಬಯಿ |
| ವಾಸ್ತವ್ಯ | : | ಮಜಗಾಂ, ಮುಂಬಯಿ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 07/04/2026**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

1978 ರಲ್ಲಿ ಜಾಲಿಯ ನಸ್ಲೀಬ್ ಭಾಗದಲ್ಲಿ ನನ್ನ ತಂದೆಯವರು 2 ಎಕರೆ 8 ಗುಂಟೆ ಜಾಗವನ್ನು ಪಡೆದಿದ್ದರು. 1996 ರಲ್ಲಿ ನನ್ನ ತಂದೆಯವರು ಆಸ್ತಿಯನ್ನು ಭಾಗ ಮಾಡಿದ್ದರು ಹಾಗೂ ಸದರಿ ಆಸ್ತಿಯನ್ನು ಪಾಲು ಮಾಡಿದ್ದು ಇರುತ್ತದೆ. ನಾನು ಬಾಂಬೆಯಲ್ಲಿ ವಾಸ ಮಾಡುತ್ತೇನೆ. ನಾನು 2014 ರಲ್ಲಿ ಆಸ್ತಿಯ ಆರ್ ಟಿ ಸಿ ಯನ್ನು ತೆಗೆದು ನೋಡಿದಾಗ ಸದರಿ ಆಸ್ತಿಯನ್ನು ನನ್ನ ಅಜ್ಜಿಯವರ ಹೆಸರಿನಲ್ಲಿ ಗಿಪ್ಟ ಡೀಡ್ ಮಾಡಿದ್ದೇವೆಂದು ನಮೂದು ಇದ್ದುದು ಕಂಡುಬಂದಿರುತ್ತದೆ. ನಂತರ ನಮ್ಮ ಅಜ್ಜಿಯವರು ಸದರಿ ಆಸ್ತಿಯನ್ನು 4 ನೇ ಆರೋಪಿಗೆ ಗಿಪ್ಟ ಡೀಡ್ ಮೂಲಕ ವರ್ಗಾವಣೆ ಮಾಡಿದ್ದು ಕಂಡುಬಂದಿರುತ್ತದೆ. ನಂತರ 4 ನೇ ಆರೋಪಿಯು 2014 ರಲ್ಲಿ 11 ನೇ ಆರೋಪಿಗೆ ನಕಲಿ ಸೇಲ್ ಡೀಡನ್ನು ಮಾಡಿ ನಕಲಿ ಚೆಕ್ಕನ್ನು ಪಡೆದಿರುವುದಾಗಿ ತೋರಿಸಿರುತ್ತಾರೆ. ಆದರೆ ನನ್ನ ಅಜ್ಜಿಯ ಆರೋಗ್ಯ ಸರಿಯಿಲ್ಲದ ಕಾರಣ ಹಾಗೂ ಅವರು ಓಡಾಡಲು ಆಗದ ಸ್ಥಿತಿಯಲ್ಲಿದ್ದರು. ಆದರೂ ಸಹ ನಮ್ಮ ಅಜ್ಜಿಯ ಹೆಸರಿನಲ್ಲಿ ಸುಳ್ಳು ನಕಲಿ ಗಿಪ್ಟ ಡೀಡನ್ನು ಹಾಗೂ ಸೇಲ್ ಡೀಡನ್ನು ತಯಾರಿಸಿ ಆಸ್ತಿಯನ್ನು ತಮ್ಮ ಹೆಸರಲ್ಲಿ ಮಾಡಿಕೊಂಡಿರುತ್ತಾರೆ. ಸದರಿ ಗಿಪ್ಟ ಡೀಡ್ ಗೆ 2 ಮತ್ತು 3 ನೇ ಆರೋಪಿತರು ಹಾಗೂ 1 ನೇ ಆರೋಪಿಯ ಮಗ ಸಾಕ್ಷಿಗಳಾಗಿರುತ್ತಾರೆ. ನಾನು , ನನ್ನ ತಾಯಿ , ನನ್ನ ಸಹೋದರಿ ಹಾಗೂ ಸಹೋದರರೆಲ್ಲರೂ ಮುಂಬಯಿಯಲ್ಲಿ ವಾಸವಾಗಿದ್ದು ಹಾಗೂ ನಾವು ಹುಟ್ಟಿದ್ದು ಮುಂಬಯಿಯಲ್ಲಿ ಆದ ಕಾರಣ ನಮಗೆ ಉರ್ದು ಭಾಷೆ ಬರುವುದಿಲ್ಲ. ಆದರೆ ಸದರಿ ಗಿಪ್ಟ ಡೀಡನಲ್ಲಿ ನಮ್ಮ ನಕಲಿ ಸಹಿಗಳನ್ನು ಉರ್ದು ಭಾಷೆಯಲ್ಲಿ ಮಾಡಿರುತ್ತಾರೆ. ಸಾಕ್ಷಿ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ

.

**ಪಾಟೀ ಸವಾಲು : 2, 4, 6 , 8 ಮತ್ತು 9 ನೇ ಆರೋಪಿ ಪರ ಶ್ರೀ ಕೆ ಹೆಚ್ ಎನ್ ವಕೀಲರಿಂದ**

ಸದರಿ ಪ್ರಕರಣದ ಆಸ್ತಿಗೆ ಸಂಬಂಧಿಸಿದಂತೆ ಸಿವಿಲ್ ದಾವೆ ಈಗಲೂ ಚಾಲ್ತಿಯಲ್ಲಿ ಇದ್ದು ಸದರಿ ಸಿವಿಲ್ ದಾವೆಯ ಪಲಿತಾಂಶ ಈಗಲೂ ಬಾಕಿ ಇದೆ. ಇಂದು ನ್ಯಾಯಾಲಯದಲ್ಲಿ ನನಗೆ ಖಾಸಗಿ ದೂರನ್ನು ತೋರಿಸಿದ್ದು ಇಲ್ಲಾ. ಗಿಫ್ಟ ಡೀಡ್ ದಾಖಲೆಗೆ ನಕಲಿ ಸಹಿಯನ್ನು ಹಾಕಿರುವುದಾಗಿ ಪ್ರಕರಣ ದಾಖಲಿಸಿದ್ದು ಇರುತ್ತದೆ. ಇಂದು ನ್ಯಾಯಾಲಯದಲ್ಲಿ ಸದರಿ ಗಿಫ್ಟ ಡೀಡ್ ಅನ್ನು ನನಗೆ ತೋರಿಸಿರುವುದಿಲ್ಲ. ಖಾಸಗಿ ದೂರನ್ನು ದಾಖಲಿಸುವ ಮೊದಲು ನಾನು ಠಾಣೆಯಲ್ಲಿ ಯಾವುದೇ ದೂರು ದಾಖಲಿಸಿರುವುದಿಲ್ಲ. ಕಾರಣ ಪೊಲೀಸರು ಖಾಸಗಿ ದೂರನ್ನು ದಾಖಲಿಸಲು ಹೇಳಿದ್ದರು. ಎಸ್ ಪಿ ಕಚೇರಿಗೆ ಪತ್ರವನ್ನು ಬರೆದ ಬಗ್ಗೆ ನನಗೆ ಈಗ ನೆನಪಿಗೆ ಬರುತ್ತಿಲ್ಲ. ಗಿಫ್ಟ ಡೀಡ್ ನಲ್ಲಿ ನನ್ನ ಹೆಸರನ್ನು ಹೇಳಿ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಹಾಗೂ ಚಾಸಾ 1 ರವರ ಸಹಿಯನ್ನು ಗಿಫ್ಟ ಡೀಡನಲ್ಲಿ ಯಾರು ಮಾಡಿದ್ದಾರೆಂದು ಗೊತ್ತಿಲ್ಲ. ಎಪ್ ಎಸ್ ಎಲ್ ವರದಿಯನ್ನು ನಾನು ನೋಡಿರುತ್ತೇನೆ ಆದರೆ ಇಂದು ನ್ಯಾಯಾಲಯದಲ್ಲಿ ಸದರಿ ಎಪ ಎಸ ಎಲ ವರದಿ ನೋಡಿರುವುದಿಲ್ಲ. 11 ನೇ ಆರೋಪಿಯನ್ನು ಹೊರತುಪಡಿಸಿ ಉಳಿದೆಲ್ಲಾ ಆರೋಪಿತರು ನಮ್ಮ ಕುಟುಂಬದ ಸದಸ್ಯರಾಗಿರುತ್ತಾರೆ. ನಾನು ಕುಟುಂಬದಿಂದ ಪ್ರತ್ಯೇಕವಾಗಿ ವಾಸವಾಗಿರುತ್ತೇನೆ. ಸದರಿ ಪ್ರಕರಣದಿಂದಾಗಿ ನನ್ನ ಮತ್ತು ಚಾಸಾ 1 ರವರ ಸಂಬಂಧವು ಆರೋಪಿತರೊಂದಿಗೆ ಅಷ್ಟಕಷ್ಟೇ ಇದೆ. ಆಸ್ತಿಗೆ ಸಂಬಂಧಿಸಿದಂತೆ ನಮ್ಮ ನಡುವೆ ತಕರಾರು ಇದ್ದ ಕಾರಣ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ದೂರಿನಲ್ಲಿ ಬರೆದ ವಿಷಯ ಸುಳ್ಳು ಎಂದರೆ ಸರಿಯಲ್ಲ. ದೂರನ್ನು ನೀಡುವ ಕಾಲಕ್ಕೆ ಸಾಕ್ಷಿದಾರರ ಹೆಸರನ್ನು ಹಾಕಿದ್ದ ಬಗ್ಗೆ ನನಗೆ ನೆನಪಿಲ್ಲ. ನನ್ನ ಹೆಸರನ್ನು ಹೇಳಿ ನನ್ನ ಸಹಿಯನ್ನು ಯಾರೂ ಹಾಕಿದ್ದೇ ಇಲ್ಲಾ ಎಂದರೆ ಸರಿಯಲ್ಲ. ಆರೋಪಿತರು ನಾನು ಹೇಳಿದಂತಹ ಯಾವುದೇ ಅಪರಾಧ ಮಾಡಿದ್ದು ಇಲ್ಲಾ ಎಂದರೆ ಸರಿಯಲ್ಲ.

**ಪಾಟೀ ಸವಾಲು : 7 ನೇ ಆರೋಪಿ ಪರ ವಕೀಲರು 2, 4, 6 , 8 ಮತ್ತು 9 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಆಳವಡಿಸಿಕೊಂಡಿರುತ್ತಾರೆ.**

**ಮರುವಿಚಾರಣೆ ಇಲ್ಲ.**

**( ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ.**